# ಬಲಿದಾನ

■ ಆಫ್ರಿಕನ್ ಮೂಲ: **ಚಿನುವಾ ಅಚಬೆ**
■ ಕನ್ನಡಕ್ಕೆ: **ಬಸು ಬೇವಿನಗಿಡದ**

ಜೂಲಿಯಸ್ ಓಬಿ ಎಷ್ಟೋ ಹೊತ್ತಿನಿಂದ ಅನ್ಯಮನಸ್ಕನಾಗಿ ಸುಮ್ಮನೆ ತನ್ನ ಟೈಪರೈಟರನ್ನೇ ನೋಡುತ್ತಿದ್ದ. ಆಚೆ ಕಡೆ ಇವನ ಮೇಲ್ವಿಚಾರಕನಾಗಿದ್ದ ದೊಡ್ಡ ಹೊಟ್ಟೆಯ ದಪ್ಪ ಕಾರಕೂನ ಮೇಜಿನ ಮೇಲೆ ತಲೆಯಿಟ್ಟುಕೊಂಡು ಊರಿಗೆ ಕೇಳಿಸುವಂತೆ ಗೊರಕೆ ಹೊಡೆಯುತ್ತಿದ್ದ. ಹೊರಗಡೆ ಸೆಕ್ಯೂರಿಟಿಯವನು ಕುರ್ಚಿಯ ಮೇಲೆಯೇ ನಿದ್ದೆಹೋಗಿದ್ದ. ಕಳೆದ ಒಂದು ವಾರದಿಂದ ತಮ್ಮ ಫ್ಯಾಕ್ಟರಿಯೊಳಗೆ ಯಾವ ಮನುಷ್ಯ ಪ್ರಾಣಿಯೂ ಸುಳಿದಿಲ್ಲವೆಂಬ ವಿಚಾರ ಜ್ಯೂಲಿಯಸ್‌ನಲ್ಲಿ ಹೊಕ್ಕ ಆತ ಮತ್ತಷ್ಟು ಕಳಾಹೀನನಾದ. ತಾಳೆಎಣ್ಣೆ ಫ್ಯಾಕ್ಟರಿಯ ಆವರಣದಲ್ಲಿದ್ದ ತೂಗುವ ಯಂತ್ರ ಖಾಲಿಯಿದ್ದು ಎಷ್ಟೋ ದಿನಗಳಾದವು. ಒಂದು ಗಿರಾಕಿಯೂ ಬಂದಿಲ್ಲ. ಇಂತಹ ಸಾಂಕ್ರಾಮಿಕ ರೋಗದ ಕಾಲದಲ್ಲಿ ಯಾರು ತಾನೆ ಹೊರಗೆ ಹೆಜ್ಜೆಯಿಡುವ ಧೈರ್ಯ ಮಾಡುತ್ತಾರೆ? ಇಡೀ ಆಫೀಸು, ಕುರ್ಚಿ, ಟೇಬಲ್, ಯಂತ್ರಗಳೆಲ್ಲ ದೂಳಿನಲ್ಲಿ ಮುಳುಗಿರುವುದು ಅವನ ಕಣ್ಣಿಗೆ ಬಿದ್ದಿತು. ತಮ್ಮ ಉದ್ದಿಮೆ ಮತ್ತೆ ಯಾವಾಗ ಸುರುವಾಗುತ್ತದೆಯೋ, ಯಾವಾಗ ಜನ ಮೊದಲಿನಂತೆ ಬಂದು ಅಡುಗೆ ಎಣ್ಣೆ ಒಯ್ಯುವರೋ, ಯಾವಾಗ ಮತ್ತೆ ಸಂತೆಯ ಕರಬರ ಸದ್ದು ಕೇಳುವುದೋ ಎಂದು ಜ್ಯೂಲಿಯಸ್ ಚಿಂತಾಕ್ರಾಂತನಾದ. ಅವನಿಗೆ ಕೂತಲ್ಲಿ ಕೂಡಲಾಗಲಿಲ್ಲ. ನಿಂತಲ್ಲಿ ನಿಲ್ಲಲಾಗಲಿಲ್ಲ. ಎದ್ದು ಬಂದು ಕಿಟಕಿಯ ಹತ್ತಿರ ನಿಂತ. ಈ ಕಿಟಕಿಯ ಮೂಲಕವೆ ಅಲ್ಲವೆ, ತಾನು ತಮ್ಮ ಫ್ಯಾಕ್ಟರಿ ಸುತ್ತಮುತ್ತಲಿನ ಗದ್ದಲ–ಗೌಜುಗಳನ್ನು ನೋಡುತ್ತಿದ್ದುದು. ಎಲ್ಲಿ ನೋಡಿದಲ್ಲೆಲ್ಲ ಜನರೇ ಇರುತ್ತಿದ್ದರು. ನೈಜೀರ್ ನದಿ ಮೇಲಿದ್ದ ಈ ಊರಿನ ಸಂತೆಯ ದಿನಗಳಲ್ಲಿ ಸೇರುವ ಜನಸಾಗರವನ್ನು ನೋಡುವುದೇ ಅವನಿಗೆ ಒಂದು ಹಬ್ಬವಾಗಿತ್ತು. ಅಷ್ಟೊಂದು ಜನ ಬರುತ್ತಿದ್ದರು, ಹೋಗುತ್ತಿದ್ದರು. ಮೊದಲಿಗೆ ವಾರಕ್ಕೆ ಒಂದು ದಿನ ಮಾತ್ರ ಸಂತೆ ನಡೆಯುತ್ತಿತ್ತು. ಆದರೆ ಇತ್ತೀಚೆಗೆ ವ್ಯಾಪಾರ–ವಹಿವಾಟು ಜಾಸ್ತಿ ಆದ ಮೇಲೆ ವಾರದಲ್ಲಿ ನಾಲ್ಕು ದಿನ ಬಜಾರು ನಡೆಯತೊಡಗಿತ್ತು. ಬಜಾರು ಎಂದರೆ ಅದೂ ಎಂತಹ ಬಜಾರು ಎನ್ನುತ್ತೀರಿ. ನೋಡನೋಡುತ್ತಿದ್ದಂತೆಯೇ ಒಂದು ಜನಜಂಗುಳಿ ಮರೆಯಾಗಿ ಮತ್ತೊಂದು ಜನಜಂಗುಳಿ ಬಂದಿರುತ್ತಿತ್ತು. ಒಂದು ರೀತಿಯಲ್ಲಿ ಉಡುಪು ತೊಟ್ಟವರು ಮಾಯವಾಗಿ ಮತ್ತೊಂದು ರೀತಿಯ ಉಡುಪು ತೊಟ್ಟವರು ನಿಂತಿರುತ್ತಿದ್ದರು. ಇಷ್ಟೊಂದು ಮಂದಿ ಎಲ್ಲಿಂದ ಬರುತ್ತಾರೆ? ಹೇಗೆ ಬರುತ್ತಾರೆ? ಹೇಗೆ ತಿರುಗಿ ಹೋಗುತ್ತಾರೆ? ಅವನಿಗೆ ಎಲ್ಲ ವಿಚಿತ್ರವೆನಿಸುತ್ತಿತ್ತು.

ಉಮುರು ಹೆಸರಿನ ಈ ಊರಿಗೆ ಬಿಳಿಯರು ಬಂದು ತಳವೂರುತ್ತಿದ್ದಂತೆಯೇ ಎಷ್ಟೆಲ್ಲ ಬದಲಾವಣೆಗಳು ನಡೆದುಹೋದವು. ತಾಳೆ ಎಣ್ಣೆ ಉತ್ಪಾದಿಸುವ ದೊಡ್ಡ ಬಂದರು ಊರು ಅಂತೆಯೂ ಉಮುರು ಹೆಸರಾಯಿತು. ಈ ಪಟ್ಟಣದ ಸುತ್ತಮುತ್ತ ಇಷ್ಟೆಲ್ಲ ಹಳ್ಳಿಗಳು ಇಷ್ಟು ದಿನ ಎಲ್ಲಿದ್ದವು ಎಂದು ಆಶ್ಚರ್ಯವಾಗುವ ರೀತಿಯಲ್ಲಿ ಸಂತೆಗಾಗಿ ಜನ ಮುಕುರಿರುತ್ತಿದ್ದರು. ಇದಕ್ಕೆಲ್ಲ ಬಹುಶಃ ಗ್ರಾಮದೇವತೆಯೇ ಕಾರಣವಿರಬೇಕು ಎಂದು ಜನ ಹೇಳುತ್ತಿದ್ದರು. ಅವಳ ಆಶೀರ್ವಾದವಿಲ್ಲದಿದ್ದರೆ ಊರು ಇಷ್ಟೆಲ್ಲ ಬದಲಾವಣೆಗೆ ಒಳಪಡಲಿಕ್ಕೆ ಸಾಧ್ಯವಿತ್ತೆ? ಅವಳ ಮಹಿಮೆಯಿಂದ ತಾನೆ ತಮ್ಮ ಊರಿಗೆ ದೇಶವಿದೇಶದ ಜನ ಬರುವಂತಾಯಿತು ಎಂದು ಇಲ್ಲಿಯವರು ಕಟ್ಟೆಗೆ ಕೂತು ಮಾತಾಡುತ್ತಿದ್ದರು. ದೇವಿಯ ಕೃಪಾಕಟಾಕ್ಷದಿಂದ ಉಮುರು ಎನ್ನುವ ಊರಿದೆಯೆಂದು ಜಗತ್ತಿಗೆ ತಿಳಿಯುವಂತಾಯಿತು.

ಸಂತೆಯ ದಿನ ಕೋಳಿ ಕೂಗುವುದಕ್ಕೂ ಮೊದಲೆ ಗ್ರಾಮದೇವತೆ ಬಜಾರ್ ರಸ್ತೆಯ ಮಧ್ಯಭಾಗದಲ್ಲಿ ನಿಂತು ನಾಲ್ಕು ದಿಕ್ಕಿಗೂ ಕೈ ಬೀಸುತ್ತ ಭೂಮಿಯ ಮೇಲಿರುವ ಮಂದಿಯನ್ನೆಲ್ಲ ಕರೆಯುತ್ತಾಳೆಂಬ ಪ್ರತೀತಿಯಿತ್ತು. ಗಂಡಸರು, ಹೆಂಗಸರು, ಮಕ್ಕಳು, ಮುದುಕರು, ಮುದುಕಿಯರು ಸೇರಿಕೊಂಡು ಸಂತೆಯೆನ್ನುವುದನ್ನು ದೊಡ್ಡ ಜಾತ್ರೆಯನ್ನಾಗಿ ಪರಿವರ್ತನೆ ಮಾಡುತ್ತಿದ್ದರು. ಯಾವುದ್ಯಾವುದೋ ಊರಿನಿಂದ, ಯಾವುದ್ಯಾವುದೋ ಹಳ್ಳಿಯಿಂದ ಜನ ತಮ್ಮ ತಮ್ಮಲ್ಲಿ ತಯಾರಾಗುವ ವಸ್ತುಗಳನ್ನು ಉಮುರುವಿಗೆ ಮಾರಲು ಹೊತ್ತುಕೊಂಡು ಬರುತ್ತಿದ್ದರು. ತಾಳೆ ಎಣ್ಣೆ, ಶೇಂಗಾ ಎಣ್ಣೆ, ಗೋವಿನಜೋಳ, ಬೆಲ್ಲ, ಮಾವು, ಬೇವು, ಬಿದಿರಿನ ಬುಟ್ಟಿ, ಕೈಮಗ್ಗದ ಜಮಖಾನೆ, ಮಣ್ಣಿನ ಪಾತ್ರೆ, ಕಡ್ಡಿಚಾಪೆ ಮತ್ತು ಇನ್ನೂ ಏನೇನೋ.

